



> ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ 'ಶುಚಿ ಪ್ಯಾಡ್'ಗಳನ್ನು ಸರ್ಕಾರ ನೀಡುತ್ತಿರುವುದರಿಂದ ಅನೇಕರಿಗೆ ಲಾಭವಾಗಿದೆ. ಮನೆಯಲ್ಲಿ ಅವರಿಗೆ ದೊರೆಯದೇ ಇರುವ ಕ್ಷೇಮ ಭಾವನೆ ಶಾಲೆಗಳಲ್ಲಿ ದೊರೆಯುತ್ತದೆ. ಉತ್ತಮ ಆಹಾರವೂ ದೊರೆಯುವುದರಿಂದ ವಿದ್ಯಾರ್ಥಿನಿಯರು ಶಾಲೆ ಬಿಡುವ ಗೋಜಿಗೆ ಹೋಗುವುದಿಲ್ಲ
>
> **-ಅಕ್ಷತಾ ಕೃಷ್ಣಮೂರ್ತಿ**
>
> **ಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ, ಅಣಶಿ**

ಕಾರವಾರದ ಗಾಂಧಿ ಉದ್ಯಾನದ ಆವರಣ ಗೋಡೆ ಮೇಲೆ ವಿದ್ಯಾರ್ಥಿನಿಯಿಂದ ಸ್ವಚ್ಛತೆ ಜಾಗೃತಿ ಚಿತ್ರ. ಈ ಸ್ವಚ್ಛತೆ ಪರಿಸರಕ್ಕೆ ಸಂಬಂಧಿಸಿದ್ದಷ್ಟೇ ಅಲ್ಲ, ಹೆಣ್ಣುಮಕ್ಕಳ ಮುಟ್ಟಿನ ಆರೋಗ್ಯಕ್ಕೆ ಸಂಬಂಧಿಸಿದ್ದೂ ಹೌದು.




ಎಂಬ ನಂಬಿಕೆ ಎಲ್ಲ ಕಾಲದಲ್ಲಿಯೂ ಇದೆ. ಪೋಷಕರನ್ನು ಕೇಳಿದರೆ, 'ಮಕ್ಕಳಿಗೆ ಶಾಲೆಯೇ ಮುಖ್ಯವಾಗಿದೆ, ಟೀಚರ್ ಹೇಳಿದ್ದನ್ನು ಚಾಚೂ ತಪ್ಪದೇ ಪಾಲಿಸುವ ಮಕ್ಕಳು ಅಮ್ಮ ಹೇಳಿದ್ದನ್ನು ಕೇಳುವುದಿಲ್ಲ ನೋಡಿ' ಎಂದು ಪ್ರೀತಿಯಿಂದ ಗದರುತ್ತಾರೆ. ತಮ್ಮದೇ ಓರಗೆಯ ಅನೇಕ ಮಕ್ಕಳು ಶಾಲೆಯಲ್ಲಿರುವುದರಿಂದ ಮಕ್ಕಳ ಪಾಲಿಗೆ ಶಾಲೆಯೆನ್ನುವುದು ಅವರ ಸಮಕಾಲೀನ ಸಮಾಜ. ಟೀಚರ್ ನೀಡುವ ಸೂಚನೆಯನ್ನು ಪಾಲಿಸಿ ಶಹಬ್ಬಾಸ್ ಎನ್ನಿಸಿಕೊಳ್ಳುವುದಕ್ಕೆ ಮಕ್ಕಳ ಬದುಕಿನಲ್ಲಿ ಹೆಚ್ಚಿನ ಆದ್ಯತೆ ಇರುತ್ತದೆ. ಈ ಮಕ್ಕಳ ಮನಸ್ಥಿತಿಯ ಮುಂದುವರೆದ ಭಾಗವೇ ಹೆಣ್ಣುಮಕ್ಕಳಿಗೆ ಆಪ್ತವೆನಿಸುವ ಮಾರ್ಗದರ್ಶನದ ಮಾತುಗಳು. ಪ್ರೀತಿಯ ಟೀಚರ್ ಅಥವಾ ಇತರ ಯಾರೇ ಆದರೂ ಶಾಲೆಯಲ್ಲಿ ಕಿಶೋರಾವಸ್ಥೆಯ ಬಗ್ಗೆ ನೀಡುವ ಸಲಹೆ ಸೂಚನೆಗಳು ಮಕ್ಕಳ ಮನಸ್ಸನ್ನು ಬೇಗನೇ ತಟ್ಟುತ್ತವೆ. ಉದಾಹರಣೆಗೆ, ವಿದ್ಯಾರ್ಥಿನಿಯರ ಋತುಚಕ್ರಕ್ಕೆ ಸಂಬಂಧಿಸಿದ ವೈಜ್ಞಾನಿಕ ವಿಚಾರಗಳು ಏನೇನು ಎಂದು ಟೀಚರ್ ಹೇಳುವ ಮಾಹಿತಿಯನ್ನು ಹುಡುಗಿಯರೂ, ಹುಡುಗರೂ ಅರಿತುಕೊಳ್ಳಲು ಸಿದ್ಧರಿರುತ್ತಾರೆ. ಈ ಕುರಿತ ಆಗುಹೋಗುಗಳನ್ನು ನೆಚ್ಚಿನ ಟೀಚರ್ ಜೊತೆ ಹಂಚಿಕೊಳ್ಳಲು ಅವರಿಗೆ ಭಿಡೆ ಇರುವುದಿಲ್ಲ.

ಆದರೆ ಹತ್ತೋ ಹನ್ನೆರಡೋ ವಯಸ್ಸಿನಲ್ಲಿ ವಿದ್ಯಾರ್ಥಿನಿಯರಿಗೆ ಋತುಚಕ್ರ ಆರಂಭವಾದರೆ, ಶಾಲೆಗೆ ಬಂದು ದಿನವಿಡೀ ಬೆಂಚಿನ ಮೇಲೆ ಕುಳಿತು, ಪಾಠ ಪ್ರವಚನಗಳನ್ನು ಕೇಳಿ, ಆಟೋಟಗಳಲ್ಲಿ ಭಾಗವಹಿಸುತ್ತ ದಿನವನ್ನು ನಿಭಾಯಿಸುವುದು ಸುಲಭವೇ? ಆಗ ಅಮ್ಮನ ರೀತಿಯಲ್ಲಿ ಆಸರೆಯಾಗಿ ನಿಲ್ಲುವವರು, ಮಾನಸಿಕವಾಗಿ ಆಧರಿಸುವವರು, ನೈತಿಕವಾಗಿ ಬೆಂಬಲಿಸುವವರು, ವಿದ್ಯಾರ್ಥಿನಿಯೊಬ್ಬಳಲ್ಲಿ ಆತ್ಮವಿಶ್ವಾಸವು ಕುಂದದೇ ಇರುವಂತೆ ಕಾಯುವವರು ಬೇಕಲ್ಲವೇ? ಅಂತಹ ಟೀಚರ್ ಅಥವಾ ಗುರುಗಳು ಶಾಲೆಯಲ್ಲಿ ಇದ್ದಾಗ ವಿದ್ಯಾರ್ಥಿವೃಂದವು ಅದೃಷ್ಟಶಾಲಿ ಎನ್ನಬೇಕು. ಅಂತಹ ಪರಿಸ್ಥಿತಿ ಇದ್ದರೆ, ಇತ್ತೀಚೆಗಷ್ಟೇ ತಮಿಳುನಾಡಿನ ಕೊಯಮತ್ತೂರಿನ ಹಳ್ಳಿಯಲ್ಲಿ ನಡೆದ ಮಾದರಿಯ ಘಟನೆಗಳು ನಡೆಯುವುದು ಸಾಧ್ಯವಿಲ್ಲ. ತಮಿಳುನಾಡಿನ ಕೊಯಮತ್ತೂರಿನ ಬಳಿಯ ಒಂದು ಹಳ್ಳಿಯಲ್ಲಿ ಏನಾಯಿತು ಗೊತ್ತೇ? ಋತುಮತಿಯಾದ 8ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳನ್ನು ಶಾಲೆಯ ತರಗತಿಯ ಹೊರಗೆ ಕೂರಿಸಿ ವಾರ್ಷಿಕ ಪರೀಕ್ಷೆ ಬರೆಸಲಾಯಿತಂತೆ. ಆ ಖಾಸಗಿ ಶಾಲೆಯ ಪ್ರಾಂಶುಪಾಲರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಈ ಘಟನೆ ನಡೆದಿರುವುದು ಕೊಯಮತ್ತೂರಿನ ಪೊಲ್ಲಾಚಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ. ಬಾಲಕಿಯು ಪರಿಶಿಷ್ಟ ಜಾತಿಗೆ ಸೇರಿದವಳಾಗಿರುವುದು ಕೂಡ ಪ್ರಕರಣಕ್ಕೆ ಇನ್ನೊಂದು ಆಯಾಮ ದೊರೆಯುವಂತಾಗಿದೆ. ಹುಡುಗಿಯು ತರಗತಿಯ ಹೊರಗೆ ಕುಳಿತು ಪರೀಕ್ಷೆ ಬರೆಯುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದರಿಂದ ಈ ವಿಷಯ ಬೆಳಕಿಗೆ ಬಂದಿದೆ.

ಆ ಹುಡುಗಿ ಒಂದು ವಾರದ ಹಿಂದಷ್ಟೇ ಋತುಮತಿಯಾಗಿದ್ದಳು.